ಇ) ಎಲ್ಲಾ ಮೂರು ಹುದ್ದೆಗಳು ಖಾಲಿ ಇವೆ. ಆದರೆ, ಪ್ರಾಥಮಿಕ ಆರೋಗ್ಯ ಕೇಂದ್ರ, ಸಂಗರಶೆಟ್ಟಿಹಳ್ಳಿ, ಇಲ್ಲಿನ ವೈದ್ಯರು, ಸದರಿ ಪ್ರಸೂತಿ ಗೃಹದಲ್ಲಿ ವಾರಕ್ಕೆ 3 ದಿನಗಳಂತೆ ಕೇ ಸನಿರ್ವಹಿಸುತ್ತಿರುತ್ತಾರೆ. ಅದೇ ರೀತಿ ಪಕ್ಕದ ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಕಿರಿಯ ಮಹಿಳಾ ಆರೋಗ್ಯ ಸಹಾಯಕಿ ಮತ್ತು ಒರ್ವ ಗ್ರೂಪ್ - ಡಿ ನೌಕರರನ್ನು ಸದರಿ ಪ್ರಸೂತಿ ಗೃಹಕ್ಕೆ ತಾತ್ಕಾಲಿಕವಾಗಿ ನಿಯೋಜಿಸಲಾಗಿದೆ.

ಈ) ಹೌದು.

ಉ) ಹೌದು.

ಸೇಡಂ ಕ್ಷೇತ್ರದ ಚಿತ್ತಾಪುರ ತಾಲ್ಲೂಕಿನ ಸಂಕನೂರು ಗ್ರಾಮಕ್ಕೆ ಕುಡಿಯುವ ನೀರಿನ ಯೋಜನೆ

2735 (3447) ಶ್ರೀ ಬಸವಂತ ರೆಡ್ಡಿ ಮೊತಕಪಲ್ಲಿ (ಸೇಡಂ): ಮಾನ್ಯ ಗ್ರಾಮೀಣಾಭಿವೃದ್ಧಿ ಪಂ. ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೇಡಂ ಕ್ಷೇತ್ರದ ಚಿತ್ತಾಪುರ ತಾಲ್ಲೂಕಿನ ಸಂಕನೂರು ಗ್ರಾಮದ ಕುಡಿಯುವ ನೀರಿಗಾಗಿ 1995-96ರಿಂದ ಇಲ್ಲಿಯವರೆಗೆ ಮಾಡಿರುವ ಖರ್ಚು ಎಷ್ಟು ?

ಆ) ಲಕ್ಷಾನುಗಟ್ಟಲೇ ಹಣ ಖರ್ಚು ಮಾಡಿದ್ದರೂ ಈ ಗ್ರಾಮದಲ್ಲಿ ಜನರಿಗೆ ದನಕರುಗಳಿಗೆ ಕುಡಿಯಲು ನೀರಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಬಂದಿದ್ದಲ್ಲಿ ಇದನ್ನು ನಿವಾರಿಸಲು ಸರ್ಕಾರವು ಕ್ರಮ ತೆಗೆದ ಕೊಳ್ಳಲಿದೆಯೇ ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು) :

ಅ) ರೂ. 3. 50 ಲಕ್ಷಗಳು.

ಆ) ಈ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಇ) ಈ ಗ್ರಾಮಕ್ಕೆ ಕೊಳವೆ ನೀರು ಸರಬರಾಜು (ಸುಧಾರಣೆ) ಯೋಜನೆಯನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಅನುದಾನ ಪಡೆಯುತ್ತಿರುವ ಶಿಕ್ಷಣ ಸಂಸ್ಥೆಗಳು

2736 (3282) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ): ಮಾನ್ಯ ಪ್ರಾಥಮಿಕ ಹಾಗೂ ಪೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರತಿ ವರ್ಷ ಅನುದಾನ ಪಡೆಯುತ್ತಿರುವ ಶಿಕ್ಷಣ ಸಂಸ್ಥೆಗಳು ಯಾವುವು ?

ಆ) ಅವುಗಳಿಗೆ ಕಳೆದ ಮೂರು ವರ್ಷಗಳಿಂದ ಕೊಟ್ಟಿರುವ ಅನುದಾನದ ಮೊತ್ತವೆಷ್ಟು

ಇ) ಈ ಸಂಸ್ಥೆಗಳಲ್ಲಿ ಯಾವಾವ ಸಂಸ್ಥೆಗಳಲ್ಲಿ ಶಿಕ್ಷಕರ ಸಂಖ್ಯೆ ನಿಗದಿಗಿಂತಲೂ ಎಷ್ಟೆಷ್ಟು ಹೆಚ್ಚು ಇವೆ ?

ಈ) ಈ ಹೆಚ್ಚಿನ ಶಿಕ್ಷಕರನ್ನು ಶಿಕ್ಷಕರ ಸಂಖ್ಯೆ ಕಡಿಮೆ ಇರುವ ಸಂಸ್ಥೆಗಳಿಗೆ ವರ್ಗಾವಣೆ ಮಾಡಲಾಗುವುದೇ ?

ಊ) ಈ ಸಂಸ್ಥೆಗಳಲ್ಲಿ ಅಕ್ರಮವೆಸಗಿರುವ ಸಂಸ್ಥೆಗಳಾವುವು ಹಾಗೂ ಅವುಗಳ ವಿರುದ್ಧ ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

ಋ) ಈ ಸಂಸ್ಥೆಗಳಲ್ಲಿ ಕಾನೂನು ಪ್ರಕಾರ ವಾರ್ಷಿಕ ವರದಿಯನ್ನು ಸರ್ಕಾರಕ್ಕೆ ಕೊಡುವಲ್ಲಿ ಹಾಗೂ ಸಂಸ್ಥೆಯ ವಾರ್ಷಿಕ ಸಭೆಗಳನ್ನು ಕರೆಯುವಲ್ಲಿ ತಪ್ಪಿದ ಸಂಸ್ಥೆಗಳಾವುವು ಹಾಗೂ ಅವುಗಳ ವಿರುದ್ಧ ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಪ್ರಾಥಮಿಕ- 2552
ಪ್ರೌಢ - 2649

ಆ) ವರ್ಷ	ಮೊತ್ತ (ಲಕ್ಷ ರೂ.)
1997-98	35513-08
1998-99	44337-76
1999-2000	51332-34

ಇ) ಖಾಸಗಿ ಅನುದಾನಿತ ಪ್ರಾಥಮಿಕ : ಪ್ರೌಢಶಾಲೆಗಳಲ್ಲಿ ಹೆಚ್ಚುವರಿ ಶಿಕ್ಷಕರನ್ನು ಗುರುತಿಸುವ ಪ್ರಕ್ರಿಯೆಯು ಈಗಾಗಲೇ ಎಲ್ಲಾ ಜಿಲ್ಲೆಗಳಲ್ಲೂ ಪ್ರಾರಂಭಿಸಲಾಗಿ ಕಾರ್ಯವು ಪ್ರಗತಿಯಲ್ಲಿದೆ. ಮೇ ತಿಂಗಳ ಕಡೆಯ ವಾರದಲ್ಲಿ ಹೆಚ್ಚುವರಿ ಶಿಕ್ಷಕರ ಮಾಹಿತಿಯು ಲಭ್ಯವಾಗಲಿದೆ.

ಈ) ಹೌದು.

ಉ) ಹೆಚ್ಚುವರಿ ಶಿಕ್ಷಕರನ್ನು ಗುರುತಿಸಿದ ನಂತರ ಅವಶ್ಯವಿರುವ ಅನುದಾನಿತ ಶಾಲೆಗಳಲ್ಲಿ ಲಭ್ಯವಿರುವ ಖಾಲಿ ಹುದ್ದೆಗಳಿಗೆ ಅವರುಗಳನ್ನು ಮರು ಹೊಂದಾಣಿಕೆ ಮಾಡುವ ಕಾರ್ಯವನ್ನು ಕೌನ್ಸಿಲಿಂಗ್ ಮೂಲಕ ಕೈಗೊಳ್ಳಲಾಗುವುದು. ಈ ಒಂದುಕಾರ್ಯ ಯೋಜನೆ ಯಶಸ್ವಿಯಾಗಿ ನಡೆದ ನಂತರವೂ ಸಹ ಅಕ್ರಮವೆಸಗಿರುವ ಸಂಸ್ಥೆಗಳು ಎಂದು ಖಾತ್ರಿಯಾದಲ್ಲಿ ಅಂತಹ ಸಂಸ್ಥೆಗಳ ವಿರುದ್ಧ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುವುದು.

ಊ) ಅನುದಾನಿತ ಶಾಲೆಗಳ ತಪಾಸಣಾ ಸಮಯದಲ್ಲಿ ಸಂಬಂಧಪಟ್ಟ ತಪಾಸಣಾಧಿಕಾರಿಗಳು ಶಾಲೆಗೆ ವಾರ್ಷಿಕ ಲೆಕ್ಕ ಪರಿಶೋಧನೆಯನ್ನು ಚಾರ್ಟರ್ಡ್ ಅಕೌಂಟೆಂಟ್‌ರವರಿಂದ ಮಾಡಿಸಿರುವುದರ ಬಗ್ಗೆ ಪರಿಶೀಲಿಸುವರು.

ಸಂಸ್ಥೆಗಳ ವಾರ್ಷಿಕ ಸಭೆಗಳನ್ನು ಕರೆಯುವುದು ಆಯಾ ಆಡಳಿತ ಮಂಡಳಿಯ ಜವಾಬ್ದಾರಿಯಾಗಿರುತ್ತದೆ. ಈ ವಿಚಾರವು ಆಯಾ ಜಿಲ್ಲೆ ನೊಂದಾಣಾಧಿಕಾರಿಗಳ ವ್ಯಾಪ್ತಿಗೆ ಒಳಪಡುತ್ತದೆ.

ರಾಜ್ಯದಲ್ಲಿರುವ ಸರ್ಕಾರಿ ಮುದ್ರಣಾಲಯಗಳು

2739 (3285) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?